# ದಿವ್ಯತ್ರಯರ ಸಂದೇಶಗಳಿಂದ ನನ್ನ ಜೀವನದ ಮೇಲೆ ಆಗಿರುವ ಪ್ರಭಾವ

ರಾಘವೇಂದ್ರ
ರಾಯಲಪಾಡು, ಕೋಲಾರ ಜಿಲ್ಲೆ

ವಿವೇಕಾನಂದರ ಜೀವನ ಹಾಗೂ ಅವರ ವಿಚಾರಗಳಿಂದ ನನ್ನ ಮೇಲೆ ಆಗಿರುವ ಪ್ರಭಾವ ಅಪಾರವಾದದ್ದು. ಅತಿ ದುರದೃಷ್ಟವನೆಂದೂ ಅಸಹಾಯಕನೆಂದೂ ಹೇಳಿಕೊಳ್ಳುತ್ತಿದ್ದ ನನಗೆ, ಆತ್ಮವಿಶ್ವಾಸ ತುಂಬಿ, ಜಗತ್ತಿನಲ್ಲಿ ಬಾಳಲು ನನ್ನ ಜೀವನಕ್ಕೆ ಚೈತನ್ಯ ನೀಡಿದ್ದು ದಿವ್ಯತ್ರಯರ ಜೀವನ ಉಪದೇಶಗಳು.

'ಯಾವ ವಿದ್ಯೆಯನ್ನು ಕಲಿತರೆ ಎಲ್ಲವನ್ನೂ ಕಲಿತಂತೆಯೋ' ಅಂತಹ ಆಧ್ಯಾತ್ಮಿಕ ಸತ್ಯವನ್ನು ಅರಿತವರು ಗುರು ಶ್ರೀರಾಮಕೃಷ್ಣರು. ಬಿ.ಎ. ಬಿ.ಎಡ್. ಮಾಡಿಕೊಂಡು ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿದ್ದ ನನ್ನವಳು, ಬಿ.ಕಾಂ. ಪದವೀಧರನಾಗಿ ಖಾಸಗಿರಂಗದ ಉದ್ಯೋಗವೊಂದರಲ್ಲಿದ್ದ ನನಗೆ ಬಿ.ಎಡ್. ಮಾಡಲು ಪದೇ ಪದೇ ಒತ್ತಾಯಿಸುತ್ತಿದ್ದಾಗ, ಒಮ್ಮೆ ನಾನವಳಿಗೆ ಮೇಲಿನ ಮಾತನ್ನು ಹೇಳಿದ್ದೆ. ನಾಡಿನ ಪ್ರತಿಷ್ಠಿತ ಪ್ರೌಢಶಾಲೆಯೊಂದರ ಮುಖ್ಯಸ್ಥನಾಗಿ ನಾನಿಂದು ಸೇವೆಸಲ್ಲಿಸುತ್ತಿರುವೆ. ಈ ವರ್ಷ ನಮ್ಮ ಶಾಲೆಯ ಹತ್ತನೆಯ ತರಗತಿಯ ಫಲಿತಾಂಶ ನೂರಕ್ಕೆ ನೂರು! ನಾನಿನ್ನೂ ಬಿ.ಎಡ್. ಮಾಡಿಲ್ಲ, ಮಾಡುವುದೂ ಇಲ್ಲ !

'ಬರುವ ಆದಾಯದ ಮೂಲ ಕೂಡ ಶುದ್ಧವಾಗಿರಬೇಕು' ಎಂದು ಶ್ರೀರಾಮಕೃಷ್ಣರು ಹೇಳುವುದನ್ನು ಓದಿ ಅದನ್ನು ಸಾಧಿಸ ಬಯಸಿದ ನಾನು ಹಲವು ಉದ್ಯೋಗಗಳನ್ನು ಬಿಡಬೇಕಾದರೂ, ಇಂದು ಅಂತಹುದೇ ಸೇವಾಮನೋಭಾವದ ಆದರ್ಶ ಸಂಸ್ಥೆಯಾದ ಬೆಂಗಳೂರಿನ 'ಆಶ್ರಯ'ದ ಉದ್ಯೋಗಿಯಾಗಿರುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ.

'ಸೇವೆ ಮತ್ತು ತ್ಯಾಗ' ಇಂದಿನ ಆವಶ್ಯಕತೆಯೆಂದು ತಿಳಿದು ನನ್ನ ಬದುಕನ್ನು ಅದಕ್ಕಾಗಿ ಅರ್ಪಿಸಲು ತೀರ್ಮಾನಿಸಿರುವೆ. ಆ ನಿಟ್ಟಿನಲ್ಲಿ ನನ್ನನ್ನು ಪ್ರೇರೇಪಿಸಿದ್ದು ಬೇರೆ ಯಾರೂ ಅಲ್ಲ – **ಸ್ವಾಮಿ ವಿವೇಕಾನಂದರು.**

ನನ್ನವಳು ಆ ಊರಿನ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಳು. ನಾನು ಶಾಲೆ ವಿದ್ಯಾರ್ಥಿಗಳಿಗೆ ಓದಲು – ಬರೆಯಲು ಸ್ಥಳ – ಸಮಯಗಳ ಅವಕಾಶ ಮಾಡಿ ಕೊಟ್ಟು, ಪಾಠದಲ್ಲಿ ಮಾರ್ಗದರ್ಶನ ಮಾಡುತ್ತಿದ್ದೆ. ಜಾತಿ ಭೇದ ಮಾಡುತ್ತಿದ್ದ ಗ್ರಾಮದ ಸಂಸ್ಕೃತಿಯನ್ನು ಧಿಕ್ಕರಿಸಿ ಎಲ್ಲ ಮಕ್ಕಳನ್ನೂ ಒಂದೆಡೆ ಸೇರಿಸಿ, ಮನೆ ಮಕ್ಕಳಂತೆ ಅವರನ್ನು ಕಾಣುತ್ತಿದ್ದೆವು.



ಮಕ್ಕಳ ಉಪಯೋಗಕ್ಕೆಂದು ಬೆಂಗಳೂರು ಶ್ರೀರಾಮಕೃಷ್ಣ ಮಠದ ಪೂಜ್ಯ ಹರ್ಷಾನಂದರು ಜಮಖಾನ, ಪೆಟ್ರೋಮ್ಯಾಕ್ಸ್ ದೀಪಗಳನ್ನು ಒದಗಿಸಿದರು. ಗ್ರಾಮಪಂಚಾಯತಿಯವರು ದೊಡ್ಡ ಕೋಣೆಯನ್ನು ಬಿಟ್ಟುಕೊಟ್ಟಿದ್ದರು ಹಾಗೂ ವಿದ್ಯುತ್ ಸೌಕರ್ಯವನ್ನು ಸಹ ಒದಗಿಸಿಕೊಟ್ಟಿದ್ದರು; ಈ ವಿದ್ಯಾದಾನದ ಸುದ್ದಿ ತಿಳಿದ 'ರಾಮಕ್ಕ –ಪದ್ಮಕ್ಕ ವಿಶ್ವಸ್ಥ ಸಮಿತಿ' ಯವರು ಉಪಯುಕ್ತ ಪುಸ್ತಕಗಳನ್ನು ನೀಡಿದ್ದರು. ಮಕ್ಕಳ ಶಾಲಾ ಹಾಜರಾತಿ, ಕಲಿಕೆಯ ಗುಣಮಟ್ಟ, ಹತ್ತನೆಯ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ತೇರ್ಗಡೆಯ ಸಂಖ್ಯೆ –ಇವೆಲ್ಲಾ ಉತ್ತಮಗೊಂಡವು. ಅತ್ಯಂತ ಸಂಭ್ರಮ, ಸಂತಸಗಳಿಂದ ಪ್ರಪ್ರಥಮ ಬಾರಿಗೆ ಆ ಗ್ರಾಮದಲ್ಲಿ, ಶಾಲೆಯಲ್ಲಿ ಶ್ರೀ ವಿವೇಕಾನಂದರ ಜಯಂತಿಯನ್ನು ಆಚರಿಸಿದೆವು.

ಹಲವು ವರ್ಷಗಳ ನಂತರ ನಾನು ದುಡಿಯುತ್ತಿದ್ದ ಊರಿಗೆ ಹೋದೆ. ಆ ಊರಿನ ತರುಣರು ನನ್ನ ಬರುವಿಕೆಗಾಗಿ ಕಾದಿದ್ದರೇನೋ ಎಂಬಂತೆ ಸುದ್ದಿ ತಿಳಿದ ತಕ್ಷಣ ಎಲ್ಲಾ ಸೇರಿದರು.

ಶಾಲೆಯಲ್ಲಿ ಸೇರಿದ್ದ ಮಕ್ಕಳು ಹೇಳಿದರು "ಸಾರ್, ನೀವು ಇನ್ನೂ ಕೆಲವು ವರ್ಷ ಇರಬೇಕಿತ್ತು. ದೊಡ್ಡ ಕ್ರಾಂತಿಯೇ ಆಗುತ್ತಿತ್ತು. ಈ ವರ್ಷ ಶ್ರೀ ವಿವೇಕಾನಂದರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿದೆವು. ಕಾಲೋನಿಯವರೇ ೧೦೦ ಮಕ್ಕಳು ಸೇರಿದ್ದರು. ಯಾರೂ ಯಾವುದೇ ಒಡಕು-ಭೇದದ ಮಾತನಾಡಲಿಲ್ಲ. ಸುತ್ತಮುತ್ತ ಹಳ್ಳಿಗಳಿಗೆಲ್ಲಾ ಹೋಗಿ ಬಂದೆವು." ಎಂದರು. ಆ ತರುಣರ ಕಣ್ಣಿನ ಕಾಂತಿ, ಆ ಮಾತುಗಳಲ್ಲಿದ್ದ ವಿಶ್ವಾಸ ನನ್ನ ಹೃದಯ ತುಂಬಿತು. ಮೌನವಾಗಿ ವಿವೇಕಾನಂದರಿಗೆ ಕೃತಜ್ಞತೆಗಳನ್ನು ಅರ್ಪಿಸಿದೆ.

ವಿಶ್ವದ ಹಲವು ಚೇತನಗಳಿಗೆ ಚೈತನ್ಯ, ಸ್ಫೂರ್ತಿ ಅವರು. ಅಂತೆಯೇ ನನ್ನಂತಹ ಸಾಮಾನ್ಯರಿಗೂ ಚೈತನ್ಯ ಸ್ಫೂರ್ತಿಗಳಾದ ದಿವ್ಯತ್ರಯರಿಗೆ ನಮೋನಮಃ.